ಅಕ್ಕು ಅರ್ಜಂಟ್ ಬರುವಂತೆ ತನಗೆ ಕರೆ ಕಳುಹಿಸಿದ್ದು ಯಾಕೆಂದು ಯೋಚಿಸುವಷ್ಟರಲ್ಲಿ ಅನಂತ ಗದ್ದೆ ಹಾದು, ಪಾಗಾರ ದಾಟಿ ಚಿನ್ಮಕ್ಕಿಯಲ್ಲಿದ್ದ. ಊರಿನ ಜತೆ ಜಗಳವಾಡಿ ಮುನಿಸಿಕೊಂಡು ಒಂಟಿಯಾದಂತೆ ಪರಪ್ರಪಂಚವೆಂಬ ಅದು ಕಾಡಿನ ಮೂಲೆಯಲ್ಲಿ ಪ್ರತ್ಯೇಕವಿತ್ತು. ಸಳ ಸಳ ಹರಿಯುತ್ತಿರುವ ಹಳ್ಳದ ಸದ್ದಿನ ಸನ್ನಿಧಿಯಲ್ಲಿ ಮನೆಯ ಮಾಡಿನಡಿಯ ತಂತಿಯ ಹರಕು ವಸ್ತ್ರದ ಚೂಪು ಚಿಟ್ಟೆ, ನಿರ್ಜನ ಉಪ್ಪರಿಗೆ, ಬಿಕೊಗುಡುವ ಪಾಳು ಕೊಟ್ಟಿಗೆ ಮತ್ತು ಮಾತನ್ನು ನುಂಗಿದ ಜಗಲಿಯ ನೀರವತೆ ಮನುಷ್ಯನ ಅನಂತ ಏಕತಾನತೆಯ ಬದುಕಿನ ಭಯಂಕರ ಬೇಸರದ ಶ್ರುತಿಯಾಗಿ ಕೇಳುತ್ತಿತ್ತು. ಹಗಲಿಡೀ ಮುಂಬಾಗಿಲು ಮುಚ್ಚಿರುವ ಮನೆಯ ಸುತ್ತಮುತ್ತ ಎಲ್ಲೊ ಗದ್ದೆಯ ನಡುವೆ ತೆಂಗಿನ ಮರ ನೋಡುತ್ತಿರುವ ಪಾಚಣ್ಣನ ನೆರತ ಕೂದಲಿನ ಹುರಿಗಟ್ಟಿ ಕೆಸರಾದ ಜನಿವಾರದ ಬೆವತು ಬಾಗಿದ ಕರಿ ಬೆನ್ನು ಕಾಣಿಸುತ್ತದೆ; ಕೊಟ್ಟಿಗೆಯ ಧರೆ ಸಂದಿಯ ತೊಂಡೆ ಚಪ್ಪರದಡಿ ಅಕ್ಕುನ




ಕಲೆ: ಪ್ರವೀಣ್ ಆಚಾರ್ಯ